# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ.ಭೀಮರಾವ್ ಬಸವರಾಜು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 57 (461) |
| ಉತ್ತರಿಸಬೇಕಾದ ದಿನಾಂಕ | : | 30.01.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ಹುಮನಾಬಾದ ಮತಕ್ಷೇತ್ರ ಮೋಳಕೇರಾ, ಘಾಟಬೋದಳ, ಹುಣಸಗೇರಾ ಗ್ರಾಮಗಳಲ್ಲಿ ಜೆ.ಜೆ.ಎಮ್ ಕಾಮಗಾರಿಯಲ್ಲಿ ಭ್ರಷ್ಟಾಚಾರ ಮತ್ತು ಕಳಪೆ ಮಟ್ಟದಲ್ಲಿ ಕಾಮಗಾರಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು: | ಬೀದರ್ ಜಿಲ್ಲೆ ಹುಮನಾಬಾದ ಮತಕ್ಷೇತ್ರ ಮೋಳಕೇರಾ, ಘಾಟಬೋರಳ, ಹುಣಸಗೇರಾ ಗ್ರಾಮಗಳಲ್ಲಿ ಜೆ.ಜೆ.ಎಮ್ ಕಾಮಗಾರಿಯಲ್ಲಿ ಯಾವುದೇ ಭ್ರಷ್ಟಾಚಾರ ಮತ್ತು ಕಳಪೆ ಮಟ್ಟದಲ್ಲಿ ಕಾಮಗಾರಿ ನಡೆದಿರುವುದಿಲ್ಲ.<br>ಬೀದರ್ ಜಿಲ್ಲೆ ಹುಮನಾಬಾದ ಮತಕ್ಷೇತ್ರ ಮೋಳಕೇರಾ, ಘಾಟಬೋರಳ, ಹುಣಸಗೇರಾ ಗ್ರಾಮಗಳ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.<br>1) **ಮೋಳಕೇರಾ** ಗ್ರಾಮದ ಜೆ.ಜೆ.ಎಂ ಕಾಮಗಾರಿಯು ಶೇ 90% ರಷ್ಟು ಪ್ರಗತಿಯ ಹಂತದಲ್ಲಿರುತ್ತದೆ ಮತ್ತು 3ನೇ ತಪಾಸಣಾ ತಂಡವು ಚಾಲ್ತಿಯಲ್ಲಿರುವಾಗ ಕಾಮಗಾರಿಯ ಗುಣಮಟ್ಟವನ್ನು ಪರಿವೀಕ್ಷಿಸಿ ತೃಪ್ತಿಕರವಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ ಹಾಗೂ ದಿನಾಂಕ: 14.09.2024 ರಂದು ರಾಜ್ಯ ಗುಣಮಟ್ಟ ಸಮಾಲೋಚಕರು (SQM) ಸದರಿ ಕಾಮಗಾರಿಯನ್ನು ಪರಿಶೀಲಿಸಿ **ತೃಪ್ತಿಕರವಾಗಿರುತ್ತದೆಂದು ಮೌಲ್ಯಾಂಕ ಶ್ರೇಣಿ** ನೀಡಿರುತ್ತಾರೆ.<br>ಪ್ರಸ್ತುತವಾಗಿ ಎಲ್ಲಾ ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಮೂಲಕ ಶುದ್ಧ ಕುಡಿಯುವ ನೀರನ್ನು ಪ್ರಾಯೋಗೀಕವಾಗಿ ಹಾಯಿಸಿ (Trial Run) ಪರೀಕ್ಷಿಸಲಾಗುತ್ತಿದೆ ಹಾಗೂ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಬಂದಪಟ್ಟ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗುವುದು.<br>2) **ಘಾಟಬೋರಾಳ** ಗ್ರಾಮದ ಜೆ.ಜೆ.ಎಂ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ ಮತ್ತು 3ನೇ ತಪಾಸಣಾ ತಂಡವು ಚಾಲ್ತಿಯಲ್ಲಿರುವಾಗ ಕಾಮಗಾರಿಯ ಗುಣಮಟ್ಟವನ್ನು ಪರಿವೀಕ್ಷಿಸಿ ತೃಪ್ತಿಕರವಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ ಹಾಗೂ ದಿನಾಂಕ: 11.10.2025 ರಂದು ರಾಜ್ಯ ಗುಣಮಟ್ಟ ಸಮಾಲೋಚಕರು (SQM) ಸದರಿ ಕಾಮಗಾರಿಯನ್ನು ಪರಿಶೀಲಿಸಿ **ತೃಪ್ತಿಕರವಾಗಿರುತ್ತದೆಂದು ಮೌಲ್ಯಾಂಕ ಶ್ರೇಣಿ** ನೀಡಿರುತ್ತಾರೆ.<br>ಪ್ರಸ್ತುತವಾಗಿ ಎಲ್ಲಾ ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಮೂಲಕ ಶುದ್ಧ ಕುಡಿಯುವ ನೀರನ್ನು ಪ್ರಾಯೋಗೀಕವಾಗಿ ಹಾಯಿಸಿ (Trial Run) ಪರೀಕ್ಷಿಸಲಾಗುತ್ತಿದೆ ಹಾಗೂ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಬಂದಪಟ್ಟ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗುವುದು.<br>3) **ಹುಣಸಗೇರಾ** ಗ್ರಾಮದ ಜೆ.ಜೆ.ಎಂ ಕಾಮಗಾರಿಯು ಶೇ 100% ರಷ್ಟು ಭೌತಿಕವಾಗಿ ಪೂರ್ಣಗೊಳಿಸಲಾಗಿರುತ್ತದೆ ಮತ್ತು SQM ಹಾಗೂ 3ನೇ ತಪಾಸಣಾ ತಂಡವು ಚಾಲ್ತಿಯಲ್ಲಿರುವಾಗ ಕಾಮಗಾರಿಯ ಗುಣಮಟ್ಟವನ್ನು ಪರಿವೀಕ್ಷಿಸಿ **ತೃಪ್ತಿಕರವಾಗಿರುತ್ತದೆಂದು ಮೌಲ್ಯಾಂಕ ಶ್ರೇಣಿ** ನೀಡಿರುತ್ತಾರೆ. ಹಾಗೂ ಸದರಿ ಗ್ರಾಮದಲ್ಲಿನ ಎಲ್ಲಾ ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಕಲ್ಪಿಸಿ ಶುದ್ಧ ಕುಡಿಯುವ ನೀರನ್ನು ಪ್ರಾಯೋಗೀಕವಾಗಿ ಹಾಯಿಸಿ (Trial Run) ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಸಂಬಂದಪಟ್ಟ ಗ್ರಾಮ ಪಂಚಾಯತಿಗೆ ಈಗಾಗಲೇ ದಿನಾಂಕ: **21.01.2026** ರಂದು ಹಸ್ತಾಂತರಿಸಲಾಗಿರುತ್ತದೆ. |

| | | |
|---|---|---|
| ಆ) | ಕಾಮಗಾರಿ ಕುರಿತು ಸ್ಥಳೀಯ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದರೂ ಸರ್ಕಾರ ಇಲ್ಲಿಯವರೆಗೆ ಯಾವುದೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು: | ಬೀದರ್ ಜಿಲ್ಲೆಯ ಹುಮನಾಬಾದ ಮತಕ್ಷೇತ್ರದ ಮೋಳಕೇರಾ, ಘಾಟಬೋರಳ, ಹುಣಸಗೇರಾ ಗ್ರಾಮಗಳಲ್ಲಿ ಜೆ.ಜೆ.ಎಮ್ ಕಾಮಗಾರಿಗಳನ್ನು ಟೆಂಡರ ಕರಾರಿನಂತೆ ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಂದಲೇ ವಿಳಂಬವಾಗಿರುವುದರಿಂದ ಸಂಬಂಧಪಟ್ಟ ಗುತ್ತಿಗೆದಾರರಿಗೆ ಈಗಾಗಲೇ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗಿದೆ.<br>ಸದರಿ 03 ಕಾಮಗಾರಿಗಳ ಪೈಕಿ 2 ಕಾಮಗಾರಿಗಳ ಕುರಿತು ಮಾಧ್ಯಮದಲ್ಲಿ ಪ್ರಸಾರವಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.<br>**1) ಹುಣಸಗೇರಾ** ಗ್ರಾಮದ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಸಂಬಂದಪಟ್ಟ ಗ್ರಾಮ ಪಂಚಾಯತಿಗೆ ಈಗಾಗಲೇ ದಿನಾಂಕ: 21.01.2026 ರಂದು ಹಸ್ತಾಂತರಿಸಲಾಗಿರುತ್ತದೆ. ಸದರಿ ಗ್ರಾಮದ ಕಾಮಗಾರಿಯನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗಿದೆ ಆದರೂ ಸಹ, ಗುತ್ತಿಗೆದಾರರ ದೋಷ ನಿರ್ವಾಹಣಾ ಅವಧಿ (DLP) ಅವಧಿಯಲ್ಲಿ ಸಣ್ಣ ಪುಟ್ಟ ನ್ಯೂನತೆಗಳನ್ನು ಈಗಾಗಲೇ ಸರಿಪಡಿಸಲಾಗಿರುತ್ತದೆ. ಪ್ರಸ್ತುತವಾಗಿ ಸದರಿ ಗ್ರಾಮದಲ್ಲಿನ ಎಲ್ಲಾ ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.<br>**2) ಮೋಳಕೇರಾ** ಗ್ರಾಮದ ಜೆ.ಜೆ.ಎಂ ಕಾಮಗಾರಿಯು ಶೇ 90% ರಷ್ಟು ಪ್ರಗತಿಯ ಹಂತದಲ್ಲಿರುತ್ತದೆ ಹಾಗೂ ಪ್ರಸ್ತುತವಾಗಿ ಎಲ್ಲಾ ಮನೆಗಳಿಗೆ ಕಾರ್ಯತ್ಮಕ ನಳ ಸಂಪರ್ಕ ಕಲ್ಪಿಸುವ ಮೂಲಕ ಶುದ್ಧ ಕುಡಿಯುವ ನೀರನ್ನು ಪ್ರಾಯೋಗೀಕವಾಗಿ ಹಾಯಿಸಿ (Trial Run) ಪರೀಕ್ಷಿಸಲಾಗುತ್ತಿದೆ ಹಾಗೂ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಬಂದಪಟ್ಟ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗುವುದು. |
| ಇ) | ಕಾಮಗಾರಿ ಕೈಗೊಂಡ ಗುತ್ತಿಗೆದಾರ ಮತ್ತು ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು | ಬೀದರ್ ಜಿಲ್ಲೆಯ ಹುಮನಾಬಾದ ಮತಕ್ಷೇತ್ರದ ಮೋಳಕೇರಾ, ಘಾಟಬೋರಳ, ಹುಣಸಗೇರಾ ಗ್ರಾಮಗಳಲ್ಲಿ ಜೆ.ಜೆ.ಎಮ್ ಕಾಮಗಾರಿಗಳನ್ನು ಟೆಂಡರ ಕರಾರಿನಂತೆ ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಂದಲೇ ವಿಳಂಬವಾಗಿರುವುದರಿಂದ ಸಂಬಂಧಪಟ್ಟ ಗುತ್ತಿಗೆದಾರರಿಗೆ ಈಗಾಗಲೇ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗಿದೆ.<br>ಆದ್ದರಿಂದ ಸದರಿ ಗ್ರಾಮಗಳಲ್ಲಿ ಯಾವುದೇ ಕಳಪೆ ಮಟ್ಟದ ಕಾಮಗಾರಿ ಆಗಿರುವುದಿಲ್ಲ ಹಾಗೂ ಶೀಘ್ರವಾಗಿ ಉಳಿದ 02 ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂದಪಟ್ಟ ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗುವುದು. |

ಸಂಖ್ಯೆ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/125/2025-26

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ ಸಚಿವರು.